


### ಮಿತಿಯಲ್ಲಿದ್ದರೆ ತೊಂದರೆಯಿಲ್ಲ

‘ಕಾಫಿ ವಿಶ್ವರೂಪಿ’, ರಘುನಾಥ ಚ.ಹ ಅವರ ಮುಖಪುಟ (ಸುಧಾ ಫೆ. 22) ಹಾಗೂ ಇತರ ಲೇಖನಗಳು ಚೇತೋಹಾರಿಯಾಗಿವೆ. ದಿನಕ್ಕೆ ಎರಡು ಮೂರು ಕಪ್ ಕಾಫಿ ಮಿತಿಯಲ್ಲಿದ್ದರೆ ಏನೂ ತೊಂದರೆಯಿಲ್ಲ.

—ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ, ಸು.ವಿಜಯಲಕ್ಷ್ಮಿ ಶಿವಮೊಗ್ಗ, ಕೆ.ಪಿ. ರಾಮಗುಂಡಿ ಬೈಲಹೊಂಗಲ, ಪಿ. ಜಯವಂತ ಪೈ, ಕುಂದಾಪುರ ಎಸ್.ವಿಜಯಕುಮಾರಿ ಬೆಂಗಳೂರು, ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು, ನಾಗರತ್ನ ಮಂಜುನಾಥ್ ರಾಚೇನಹಳ್ಳಿ, ಮಧುರ ಸುಬ್ರಹ್ಮಣ್ಯ ಬೆಂಗಳೂರು

### ಹೆದರಿಕೆ; ಸಮಾಧಾನ

‘ಕಾಫಿ; ಕಠೋರ ಸತ್ಯ’ (ಡಾ. ಡಿ.ಕೆ. ಮಹಾಬಲರಾಜು) ಲೇಖನ ಓದಿ ಒಂದು ರೀತಿ ಹೆದರಿಕೆ ಆಯಿತು. ಈ ಹಿಂದೆ ಮಧುಮೇಹ ಕಡಿಮೆಯಾಗುತ್ತದೆ ಎಂದು ತಿಳಿದು ಅದರಂತೆ ಅನುಸರಿಸುತ್ತಿದ್ದೆ. ಈಗ ಮತ್ತೊಮ್ಮೆ ವಿಚಾರಿಸುವಂತೆ ಆಯಿತು. ಆಮೇಲೆ ಡಾ. ಬ್ರಹ್ಮಾನಂದ ನಾಯಕ ಅವರ ಕಾಫಿ ಆರೋಗ್ಯವಂತರ ಪೇಯ ಲೇಖನ ಓದಿ ಸಮಾಧಾನವಾಯಿತು. ಇಬ್ಬರು ವೈದ್ಯರದ್ದು ವಿರುದ್ಧ ಅಭಿಪ್ರಾಯ ಯಾಕೆ ತಿಳಿಯಲಿಲ್ಲ.

—ಕೆಕ್ಕಾರ ಎಸ್.ಎ. ಭಟ್ಟ, ಕುಮಟ

### 100 ಕಪ್ ಕಾಫಿ ಸಾಧ್ಯವಿಲ್ಲ

‘ಒಬ್ಬ ಮನುಷ್ಯ ಹತ್ತು ನಿಮಿಷದಲ್ಲಿ 100 ಕಪ್ ಕಾಫಿ ಕುಡಿದರೆ ಆತ ಸತ್ತೇಹೋಗುತ್ತಾನೆ’ ಎಂದು ಲೇಖಕರು ಹೇಳುತ್ತಾರೆ. ಹತ್ತು ನಿಮಿಷದಲ್ಲಿ 100 ಕಪ್ ಕಾಫಿ ಬಿಡಿ, 100 ಕಪ್ ನೀರನ್ನೂ ಕುಡಿಯಲು ಸಾಧ್ಯವಿಲ್ಲ.

— ಎ. ಜಾನಕಿರಾಮ್ ಬೆಂಗಳೂರು

### ವಿಷಾದವೆನಿಸಿತು

ಕಾಫಿಯನ್ನು ಭಾರತಕ್ಕೆ ಪರಿಚಯಿಸಿದ ಬಾಬಾ ಬುಡನ್ ಅವರ ಹೆಸರನ್ನು ಯಾರೊಬ್ಬರೂ ಉಲ್ಲೇಖಿಸದಿರುವುದು ವಿಷಾದವೆನಿಸಿತು.

—ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

### ಮನೋಜ್ಞ ಚಿತ್ರ ಬರಹ

‘ಜಾನುವಾರುಗಳ ರಂಗೀಲಾ ಲೋಕ’ (ದಿಲಾವರ್ ರಾಮದುರ್ಗ) ಲೇಖನ ಖುಷಿ ತಂದಿತು. ರೈತ ತಾನು ಬಳಸುವ ಜಾನುವಾರುಗಳನ್ನು ಸಾಕಿ ಬೆಳೆಸುವುದರ ಜೊತೆಗೆ ಅಲಂಕಾರ ಮಾಡಿ ಖುಷಿ ಪಡುವ ರೀತಿ ಮನೋಜ್ಞವಾಗಿದೆ.

—ರವೀಂದ್ರನಾಥ ಶಿ. ಯಡಹಳ್ಳಿ, ಬಾಗಲಕೋಟೆ, ಮಹಾವೀರ ಕಾಸರ ಶಿವಮೊಗ್ಗ

### ಬೆಳ್ಗೊಳ; ಮೆರುಗು

‘ಇತಿಹಾಸದ ಬಿಂಬದಲ್ಲಿ ಶ್ರವಣಬೆಳ್ಗೊಳ’ (ಟಿ.ಎಸ್. ಗೋಪಾಲ್) ಚಿತ್ರ ಲೇಖನ ಸಾಂದರ್ಭಿಕ ಹಾಗೂ ಮಾಹಿತಿಪೂರ್ಣ. ಬೆಟ್ಟದ ಮಾರ್ಗದಲ್ಲಿರುವ ಸ್ಫಟಿಕ ಸದೃಶ ಜಲಾವೃತವಾದ ಸರೋವರದಿಂದಲೇ ‘ಬೆಳ್ಗೊಳ’ಕ್ಕೆ ಈ ಹೆಸರು ಬರಲು ಕಾರಣವೇನೆಂಬುದು ಈ ಲೇಖನದಿಂದ ಸ್ಪಷ್ಟವಾಗಿ ತಿಳಿಯಿತು. ಮುಖಪುಟದಲ್ಲೊಂದು ಗೊಮ್ಮಟನ ಚಿತ್ರ ಇರಬೇಕಿತ್ತು.

—ಕೊಹಿಮ ಬಸರಕೋಡು, ಎಸ್.ಚನ್ನಪ್ಪ ಮೈಸೂರು, ಗಾಣಧಾಳು ರಾಮಣ್ಣ, ಎಚ್.ಆನಂದಕುಮಾರ್ ಚಿತ್ರದುರ್ಗ

### ಗೃಹಿಣಿಯೆಂದರೆ ದುಡಿಮೆ

‘ಮನೆ ಕೆಲಸಕ್ಕೆ ಬೆಲೆ ಇಲ್ಲವೇ?’ (ಚೈತ್ರ ಎಲ್. ಹೆಗಡೆ) ಬರಹ ವಿಚಾರಪೂರ್ಣ.

—ಎಸ್. ಪ್ರಭಾ, ಬೆಂಗಳೂರು, ರತ್ನಾಕರ ಹೆಗಡೆಕಟ್ಟೆ ಮೂಡುಬಿದರೆ, ಮೀನಾಕ್ಷಿ ಕೆ. ರಾಮಗುಂಡಿ ಬೈಲಹೊಂಗಲ

‘ಕಣ್ಣೂರು ಕೋಟೆ’ ಪ್ರವಾಸ ಲೇಖನ ಚೆನ್ನಾಗಿದೆ. ಚಿತ್ರಗಳೂ ಗಮನಸೆಳೆದವು.

—ವಿ.ಗಜಾನನ ಹಲೇಕಲ್ ಶಿರಸಿ, ನಾರಾಯಣ ಯಾಜಿ, ಶಿರಾಲಿ

